ಕೇಂದ್ರ ಯೋಜನೆಗಳು ಹಾಗೂ ಕೇಂದ್ರ ಪ್ರಾಯೋಜಿತ ಯೋಜನೆಗಳ ಸಾರ್ವಜನಿಕ ಹಣಕಾಸು ನಿರ್ವಹಣಾ ವ್ಯವಸ್ಥೆಯ (PFMS) ಆನ್‌ಬೋರ್ಡಿಂಗ್ ಮಾಡುವುದರೊಂದಿಗೆ ಕೇಂದ್ರ ಸರ್ಕಾರದ PRIASoft ತಂತ್ರಾಂಶವನ್ನು ಸಂಯೋಜಿಸುವ ಕುರಿತು ಚರ್ಚಿಸಲು ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ದಿನಾಂಕ:19-07-2018ರಂದು ಅಪರಾಹ್ನ 04:30 ಗಂಟೆಗೆ ನಡೆದ ಸಭೆಯ ನಡವಳಿಗಳು.

<u>ಸಭೆಗೆ ಹಾಜರಾದ ಅಧಿಕಾರಿಗಳು:</u>

1. ಶ್ರೀ ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ. ಬೆಂಗಳೂರು.
2. ಶ್ರೀ. ಪ್ರಶಾಂತ್, ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
3. ಶ್ರೀ ಮಹಮ್ಮದ್ ಇಮ್ತಿಯಾಜ್, ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
4. ಶ್ರೀ ಮುರಳಿ, ಸಂಶೋಧನಾಧಿಕಾರಿ, ರಾಜ್ಯ ಪಂಚಾಯತ್ ಸಂಪನ್ಮೂಲ ಕೇಂದ್ರ, ಎಂ.ಜಿ.ಐ.ಆರ್.ಇ.ಡಿ, ಆವರಣ, ಜಕ್ಕೂರು, ಬೆಂಗಳೂರು.

ಪ್ರಾರಂಭದಲ್ಲಿ ಶ್ರೀ ಕೆ.ಯಾಲಕ್ಕಿಗೌಡ, ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸ್ವಾಗತಿಸಿದರು ಹಾಗೂ ಸಭೆಯ ವಿಷಯಸೂಚಿಗಳ ಬಗ್ಗೆ ವಿವರವಾಗಿ ಚರ್ಚಿಸಿ ಈ ಕೆಳಕಂಡ ವಿಷಯಗಳ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ರವರ ಅವಗಾಹನೆಗೆ ಸಲ್ಲಿಸಲು ತೀರ್ಮಾನಿಸಲಾಯಿತು.

1. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್) ಮಾತನಾಡುತ್ತಾ ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯವು 14ನೇ ಹಣಕಾಸು ಆಯೋಗದ ಅನುದಾನವನ್ನು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡಲು, ಯೋಜನೆಯಡಿ ಭರಿಸಿದ ವೆಚ್ಚವನ್ನು ದಾಖಲೆ ಮಾಡಲು ಹಾಗೂ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ತರುವ ಸಲುವಾಗಿ ಕಡ್ಡಾಯವಾಗಿ PFMS (Public Financial Management System) ವ್ಯವಸ್ಥೆಯನ್ನು ಬಳಸಲು ಸೂಚಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.
2. ಎನ್.ಐ.ಸಿ.ಯ ಹಿರಿಯ ತಾಂತ್ರಿಕ ನಿರ್ದೇಶಕರು ಮಾತನಾಡುತ್ತಾ, 14ನೇ ಹಣಕಾಸು ಆಯೋಗ ಅನುಧಾನದಡಿ ಗ್ರಾಮ ಪಂಚಾಯತಿಗಳಿಗೆ ಹಣಕಾಸು ನಿರ್ವಹಣೆ, ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ತರುವ ಸಲುವಾಗಿ PFMS ಮತ್ತು PRIASoft ತಂತ್ರಾಂಶವನ್ನು ಕೇಂದ್ರ ಸರ್ಕಾರದ ಹಂತದಲ್ಲಿ ಸಂಯೋಜಿಸಲಾಗಿದ್ದು, PRIASoft ತಂತ್ರಾಂಶವನ್ನು ಕಡ್ಡಾಯವಾಗಿ ಬಳಸುವಂತೆ ದಿನಾಂಕ:19-07-2018ರಂದು ಕೇಂದ್ರದ ಪಂಚಾಯತಿ ರಾಜ್ ಮಂತ್ರಾಲಯದ ವೀಡಿಯೋ ಸಂವಾದದಲ್ಲಿ ಅಪರ ಕಾರ್ಯದರ್ಶಿಗಳಾದ ಶ್ರೀ ಬಾಲಪ್ರಸಾದ್‌ರವರು ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.
3. ಎನ್.ಐ.ಸಿ.ಯ ತಾಂತ್ರಿಕ ನಿರ್ದೇಶಕರು ಮಾತನಾಡುತ್ತಾ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಗ್ರಾಮ ಪಂಚಾಯತಿಗಳ ಲೆಕ್ಕಗಳ ನಿರ್ವಹಣೆಗಾಗಿ ಪಂಚತಂತ್ರವನ್ನು ಬಳಸಲಾಗುತ್ತಿದೆ. PRIASoft ತಂತ್ರಾಂಶದೊಂದಿಗೆ ಪಂಚತಂತ್ರ ತಂತ್ರಾಂಶದೊಂದಿಗೆ ಸಂಯೋಜನೆಗೊಳಿಸಲು ಅಥವಾ PFMS ತಂತ್ರಾಂಶದೊಂದಿಗೆ ಪಂಚತಂತ್ರ ತಂತ್ರಾಂಶವನ್ನು ಸಂಯೋಜನೆಗೊಳಿಸಲು ಭಾರತ ಸರ್ಕಾರದ ಪಂಚಾಯತ್ ರಾಜ್ ಮಂತ್ರಾಲಯಕ್ಕೆ ಅನುಮತಿ ನೀಡುವಂತೆ ಕೋರಲಾಗಿತ್ತು. ಆದರೆ, PRIASoft ಮತ್ತು PFMS ತಂತ್ರಾಂಶವನ್ನು ಪಂಚತಂತ್ರ ತಂತ್ರಾಂಶದೊಂದಿಗೆ ಸಂಯೋಜನೆಗೊಳಿಸಲು ಸಾಧ್ಯವಿಲ್ಲವೆಂದು ಕೇಂದ್ರ ಸರ್ಕಾರವು ತಿಳಿಸಿರುತ್ತಾರೆಂದು ಕೇಂದ್ರದ್ದ ಪಂಚಾಯತಿ ರಾಜ್ ಮಂತ್ರಾಲಯದ ವೀಡಿಯೋ ಸಂವಾದದಲ್ಲಿ ತಿಳಿಸಿರುತ್ತಾರೆಂದು ಸಭೆಯ ಗಮನಕ್ಕೆ ತಂದರು.

4. PRIASoft ತಂತ್ರಾಂಶವನ್ನು ಬಳಸದೇ ಇದ್ದಲ್ಲಿ, 14ನೇ ಹಣಕಾಸು ಆಯೋಗದ ಅನುದಾನವನ್ನು 2018-19ನೇ ಸಾಲಿನಿಂದ ರಾಜ್ಯಕ್ಕೆ ಬಿಡುಗಡೆಗೊಳಿಸುವುದಿಲ್ಲವೆಂದು ದಿನಾಂಕ:19-07-2018ರಂದು ಕೇಂದ್ರದ ಪಂಚಾಯತಿ ರಾಜ್ ಮಂತ್ರಾಲಯದ ವೀಡಿಯೋ ಸಂವಾದದಲ್ಲಿ ಅಪರ ಕಾರ್ಯದರ್ಶಿಗಳಾದ ಶ್ರೀ ಬಾಲಪ್ರಸಾದ್‌ರವರು ತಿಳಿಸಿರುತ್ತಾರೆ. PRIASoft ತಂತ್ರಾಂಶವನ್ನು ಬಳಸದೇ ಇದ್ದಲ್ಲಿ 14ನೇ ಹಣಕಾಸು ಆಯೋಗದ ಅನುದಾನ ದೊರೆಯದೇ ಇರುವುದರಿಂದ, 14ನೇ ಹಣಕಾಸು ಆಯೋಗದ ಯೋಜನೆಗೆ ಮಾತ್ರ PRIASoft ತಂತ್ರಾಂಶವನ್ನು ಬಳಸುವುದು ಸೂಕ್ತವೆಂದು ಸಭೆಯು ಅಭಿಪ್ರಾಯಪಟ್ಟಿತ್ತು.

ಮೇಲ್ಕಂಡ ಎಲ್ಲಾ ವಿಷಯಗಳ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)ರವರ ಗಮನಕ್ಕೆ ತಂದು ಅವರ ಅನುಮೋದನೆಯನ್ನು ಪಡೆದುಕೊಂಡ ನಂತರ ಅಗತ್ಯ ಕ್ರಮ ಕೈಗೊಳ್ಳಬಹುದು ಎಂದು ನಿರ್ದೇಶಕರು(ಪಂ.ರಾಜ್-2)ರವರು ಸಭೆಗೆ ತಿಳಿಸಿದರು.

ಕೊನೆಯಲ್ಲಿ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

ಸಂ:ಗ್ರಾಅಪ 44 ಗ್ರಾಪಸ 2015(ಪಿ)

(ಕೆ.ಯಾಲಕ್ಕಿಗೌಡ)
ನಿರ್ದೇಶಕರು (ಪಂ.ರಾಜ್-2)ಹಾಗೂ
ಸರ್ಕಾರದ ಪದನಿಮಿತ್ತ ಜಂಟಿಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಂಸ್ಥೆ, ಮೈಸೂರು.
2. ನಿರ್ದೇಶಕರು, ಇ-ಆಡಳಿತ, ಗ್ರಾಅಪ ಇಲಾಖೆ, ಬೆಂಗಳೂರು.
3. ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ. ಬೆಂಗಳೂರು.
4. ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ, ಬೆಂಗಳೂರು.
5. ರಾಜ್ಯ ಯೋಜನಾ ವ್ಯವಸ್ಥಾಪಕರು(ಇ-ಪಂಚಾಯತ್), ಗ್ರಾಅಪ ಇಲಾಖೆ.

ಪ್ರತಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.
2. ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ, ಬೆಂಗಳೂರು.